<u>ಪಿಡಬ್ಲ್ಯೂ-**1**</u>

<u>ದಿನಾಂಕಃ **27-04-2026** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು 2 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್.ಜಿ.ಎಂ. ವಕೀಲರಿಂದಃ-</u>

ದಾವಾಸ್ತಿಗಳೆಲ್ಲವೂ ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಗದಗದಲ್ಲಿರುವ ಆಸ್ತಿಗಳಲ್ಲಿ ಸೂರ್ಯಕಾಂತಿ, ಮೆಣಸಿನ ಕಾಯಿ, ಹತ್ತಿ, ಕಡಲೇ ಕಾಯಿ ಮುಂತಾದ ಬೆಳಗಳನ್ನು ಬೆಳೆಯುತ್ತಾರೆ. ಇವುಗಳಿಂದ ಬಂದಂತಹ ಆದಾಯವನ್ನು ನಮ್ಮ ತಂದೆಯವರೇ ಉಪಯೋಗಿಸುತ್ತಿದ್ದರು ಎಂದರೆ ಸರಿ. ಸದರಿ ಆದಾಯದಿಂದ ದಾವಾ ಐಟಂ ನಂ.2 ರಿಂದ 5 ನ್ನು ಒಟ್ಟು ಕುಟುಂಬದ ಪರವಾಗಿ ಖರೀದಿಸಲಾಗಿದೆ ಎಂದರೆ ಸರಿ. 1 ನೇ ಪ್ರತಿವಾದಿ ಬಿ.ಇ ಮೆಕಾನಿಕ್ ಓದಿರುತ್ತಾರೆ. ಟಿ-ಸ್ಟೋನ್ ಕಂಪನಿಯಲ್ಲಿ 1 ನೇ ಪ್ರತಿವಾದಿ ಕೆಲಸ ಮಾಡುತ್ತಿದ್ದಾರೆ. ನನ್ನ ತಂದೆ ಅರಸೀಕೆರೆಯಲ್ಲಿ ವಾಸವಿದ್ದರು ಎಂದರೆ ಸರಿ. ನಾನು ಮದುವೆಯಾದ ನಂತರ ಬೆಂಗಳೂರಿನಲ್ಲಿ ವಾಸವಿದ್ದೇನೆಂದರೆ ಸರಿ. ನನ್ನ ತಂದೆಗೆ ಬಿದ್ದು ಏಟು ಮಾಡಿಕೊಂಡಾಗಿನಿಂದ 1 ನೇ ಪ್ರತಿವಾದಿ ನನ್ನ ತಂದೆಯ ಜೊತೆಯಲ್ಲಿ ಇರಲು ಆರಂಭಿಸಿದರು. ನನ್ನ ತಂದೆಯನ್ನು ನನ್ನ ತಾಯಿ ಹಾಗೂ ನಾವೆಲ್ಲರೂ ನೋಡಿಕೊಳ್ಳುತ್ತಿದ್ದೆವು. ದಾವಾಸ್ತಿಗಳೆಲ್ಲವೂ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಆ ಕಾರಣದಿಂದ 2 ನೇ ಪ್ರತಿವಾದಿ ದಾವಾಸ್ತಿಗಳೆಲ್ಲದರಲ್ಲೂ ಸಮಾನವಾದ ಭಾಗದ ಹಕ್ಕು ಇದೆ ಎಂದರೆ ಸರಿ. ನಾನಾಗಲೀ 2 ನೇ ಪ್ರತಿವಾದಿಯಾಗಲೀ ಅರಸೀಕೆರೆ ನೊಂದಣಿ ಕಚೇರಿಯಲ್ಲಿ ಯಾವುದೇ ದಾಖಲೆಗೆ ಸಹಿ ಮಾಡಿರುವುದಿಲ್ಲ. ನಾನು ಮತ್ತು 2 ನೇ ಪ್ರತಿವಾದಿ 1 ನೇ ಪ್ರತಿವಾದಿ ಪ್ರತಿಪಾದಿಸುತ್ತಿರುವ ದಾನಪತ್ರದಲ್ಲಿ ಸಹಿ ಮಾಡಿರುವುದಿಲ್ಲ. ಅದರಲ್ಲಿರುವ ಸಹಿಗಳನ್ನು ಯಾರು ಮಾಡಿರುತ್ತಾರೆಂದು ಗೊತ್ತಿಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

**( ಕಿರಣ್ ಕುಮಾರ್ ಡಿ. ವಡಿಗೇರಿ )**
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **27-04-2026.**